ವಿಜಯವಾಣಿ
ಕನ್ನಡಿಗರ ಧ್ವನಿ

# ಲೀಡರ್ ಪ್ರಾಜೆಕ್ಟ್

ಉದ್ಯಮ ವಲಯ ಪ್ರವೇಶಿಸಿ ಅಂಬಾನಿಗಳಂತೆ ಆಗಬೇಕೆಂದು ಕನಸುವವರಿಗೆ ಕಡಿಮೆಯಿಲ್ಲ. ಎಲ್ಲರಿಗೂ ಹಾಗೆ ಆಗಲಿಕ್ಕೆ ಸಾಧ್ಯವಿಲ್ಲವೆನ್ನುವುದು ನಿಜವಾದರೂ ಅಂತಹ ಉತ್ಸಾಹಕ್ಕೆ, ಹೊಸ ಹೊಸ ಐಡಿಯಾಗಳಿಗೆ ಎಂದೂ ಕೊರತೆಯಿರುವುದಿಲ್ಲ.



ಅಂತಹದ್ದೊಂದು ವಿನೂತನ ಐಡಿಯಾ ನಿಮಗಿದ್ದರೆ ಜೈನ್ ಡೀಮ್ಡ್ ವಿಶ್ವವಿದ್ಯಾಲಯ ಏರ್ಪಡಿಸಿರುವ ಎಂಟರ್‌ಪ್ರಿನರ್‌ಶಿಪ್ ಪ್ರೊಗ್ರಾಮ್‌ನಲ್ಲಿ ಇನ್ನಷ್ಟು ತರಬೇತಿ ಪಡೆದುಕೊಳ್ಳಬಹುದು. ಏಪ್ರಿಲ್ 30 ರಿಂದ ಮೇ 18 ರವರೆಗೆ ಜೈನ್ ವಿವಿಯಲ್ಲಿ ಆಯೋಜಿಸಲಾಗಿರುವ 'ಲೀಡರ್ ಪ್ರಾಜೆಕ್ಟ್ 2012' ಇಂತಹದ್ದೊಂದು ಅವಕಾಶಕ್ಕೆ ಮುನ್ನುಡಿ ಬರೆದಿದೆ.

ವ್ಯವಹಾರ ನಿಪುಣತೆ, ಹೊಸ ಯೋಜನೆಗಳು ನಿಮ್ಮಲ್ಲಿದ್ದರೆ, ಈಗಾಗಲೇ ಉದ್ಯಮ ಸ್ಥಾಪಿಸಿದ್ದರೆ ಅಥವಾ ಬೇರೆಡೆ ಉದ್ಯೋಗದಲ್ಲಿದ್ದೂ ಕೂಡ ನಿಮ್ಮಲ್ಲಿರುವ ಯೋಜನೆಗಳನ್ನು ಹಂಚಿಕೊಳ್ಳಲು ಸಿದ್ಧವಿದ್ದರೆ ಈ ಕೋರ್ಸ್‌ನಲ್ಲಿ ಭಾಗವಹಿಸಬಹುದು. ವಿದ್ಯಾರ್ಥಿಗಳಿಗಾದರೆ ಕೋರ್ಸ್ ಪ್ರವೇಶ ಉಚಿತ. ಉಳಿದವರಿಗೆ ಫೀಸ್ ಇದೆ.

ಹೆಸರು, ಉದ್ಯೋಗ, ವಿದ್ಯಾರ್ಹತೆ, ಸಂಪರ್ಕ ಸಂಖ್ಯೆ ಇತ್ಯಾದಿ ಮಾಹಿತಿಗಳೊಂದಿಗೆ ನೋಂದಣಿಗೆ ಮೈಲ್ ಮಾಡಬಹುದು. ಮೇಲ್ ವಿಳಾಸ-leader@jainuniversity.ac.in.

ಆಯ್ಕೆಯಾದವರನ್ನು ಸಂದರ್ಶನ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ 080-43431000 ಅನ್ನು ಸಂಪರ್ಕಿಸಬಹುದು.